# ಪ್ರಾರ್ಥಿಸಬೇಕಾದ ಪ್ರವಾದನೆಗಳು



ಸಹೋ. ವಿನ್ಸೆಂಟ್ ಸೆಲ್ವಕುಮಾರ್

# ಸಂಪಾದಕರ ಟಿಪ್ಪಣಿ



ನಿಜವಾದ ಪ್ರವಾದನೆಗಳು ಬಹಳ ಮುಖ್ಯ ಯಾಕಂದರೆ ಅವು ದೇವರ ಬಳಿಯಿಂದ ಬರುವ ಸಂದೇಶಗಳಾಗಿವೆ. ಸತ್ಯವೇದ ಹೇಳುತ್ತದೆ; "ದೇವದರ್ಶಕರಿಲ್ಲದಿರುವಲ್ಲಿ ಜನರು ಅಂಕೆಮೀರುವರು" (ಜ್ಞಾನೋಕ್ತಿ 29:18). ಆದ್ದರಿಂದ ಪ್ರವಾದನೆಗಳು ನಮ್ಮನ್ನು ಸಂತೈಸುತ್ತವೆ, ಸಿದ್ಧಗೊಳಿಸುತ್ತವೆ ಹಾಗು ಎಚ್ಚರಿಕೆಯನ್ನು ನೀಡುತ್ತವೆ.

ಕರ್ತನು, ತನ್ನ ಅಪಾರ ಕೃಪೆಯಿಂದ ಇಂಥಾ ಅನೇಕ ಪ್ರವಾದನೆಗಳನ್ನು ನನ್ನ ಕೈಗೆ ಒಪ್ಪಿಸಿದ್ದಾನೆ; ಅವು ಆತನ ಯೋಜನೆಗಳಾಗಿರಬಹುದು, ಸೈತಾನನ ಕುಯುಕ್ತಿಗಳಾಗಿರಬಹುದು ಹಾಗು ಜನರ ಮೇಲೆ, ದೇಶದ ಮೇಲೆ ಬರುವಂತ ನಾಶನಗಳಿಗೆ ಸಂಬಂಧಪಟ್ಟವುಗಳಾಗಿರಬಹುದು. ಈ ಪ್ರಕಟಣೆಗಳ ಭಾಗಗಳನ್ನು "ಪ್ರವಾದನೆಗಳನ್ನು ಹೀನೈಸಬೇಡಿರಿ" (1 ಥೆಸ 5:20) ಎಂಬವರ ಹಾಗು ಭಾರವುಳ್ಳ ಹೃದಯದಿಂದ ವಿಜ್ಞಾಪನೆ ಮಾಡುವವರ ಕೈಗಳಲ್ಲಿಡುತ್ತಿದ್ದೇನೆ. ಭಾರತ ದೇಶದ ಮೇಲೂ, ಕರ್ನಾಟಕ ರಾಜ್ಯದ ಮೇಲೂ ಬರಲಿರುವಂತ ಅಪಾಯಗಳನ್ನು ಕುರಿತು ಕರ್ತನು ಮುನ್ನೆಚ್ಚರಿಸಿರುವಂತ ಮಾತುಗಳನ್ನು ನೀವು ತಿಳಿದುಕೊಳ್ಳಬೇಕೆಂತಲೂ ಅವುಗಳಿಗಾಗಿ ಪ್ರಾರ್ಥಿಸಬೇಕೆಂತಲೂ ಈ ಕೈಪುಸ್ತಕವನ್ನು ಪ್ರಚುರಪಡಿಸುತ್ತಿದ್ದೇವೆ. ಇದನ್ನು ಶ್ರದ್ಧೆಯಿಂದ ಓದಿ ದೇವರ ಪ್ರವಾದನೆಯ ಮಾತುಗಳನ್ನು ಅರ್ಥಮಾಡಿಕೊಂಡು ಅದಕ್ಕಾಗಿ ಪ್ರಾರ್ಥಿಸಿರಿ.

ಕರ್ತನ ಎರಡನೆಯ ಬರೋಣದಂದು ಆತನ ಮುಂದೆ ನಿಲ್ಲಲಿಕ್ಕೆ ಯೋಗ್ಯರಾಗುವಂತೆ ನೀವು ಸಿದ್ಧರಾಗಿ ಇತರರನ್ನೂ ಸಿದ್ಧಗೊಳಿಸುತ್ತೀರೆಂದು ನಿರೀಕ್ಷಿಸಿ ಅದಕ್ಕಾಗಿ ಪ್ರಾರ್ಥಿಸುತ್ತಿದ್ದೇನೆ.

ನಿಮ್ಮ ಪ್ರೀತಿಯ ಸಹೋದರನು,

**ವಿನ್ಸೆಂಟ್ ಸೆಲ್ವಕುಮಾರ್**


# ನಾವು ಯಾಕೆ ಪ್ರಾರ್ಥನೆ ಮಾಡಬೇಕು?

ನಾವೆಲ್ಲಾ ಪ್ರಾರ್ಥನೆ ಮಾಡಬೇಕು ಹಾಗು ನಮ್ಮ ಪ್ರಾರ್ಥನೆಗಳನ್ನು ಮಿತಿಗೊಳಿಸಬಾರದು. ಕರ್ತನು ನಮ್ಮ ಅವಶ್ಯಕತೆಗಳನ್ನು ತಿಳಿದಿದ್ದಾನೆ ಹಾಗು ಸೂಕ್ತ ಸಮಯದಲ್ಲಿ ನಮಗೆ ಎಲ್ಲವನ್ನು ಒದಗಿಸುತ್ತಾನೆ ಯಾಕಂದರೆ, "ಯೆಹೋವನೇ, ನನ್ನ ನಾಲಿಗೆಯ ಮಾತುಗಳಲ್ಲಿ ನೀನು ಅರಿಯದೆ ಇರುವಂಥದು ಒಂದೂ ಇಲ್ಲ" (ಕೀರ್ತನೆ 139:4) ಎಂದು ವಾಕ್ಯದಲ್ಲಿ ಬರೆಯಲಾಗಿದೆ.

ಆದರೆ ನಾವು ಇತರರಿಗೋಸ್ಕರ ಪ್ರಾರ್ಥಿಸಿದಾಗ, ನಮ್ಮ ಪಾತ್ರೆಯು ತುಂಬಿ ಹೊರ ಚೆಲ್ಲುತ್ತದೆ. ಐದು ರೊಟ್ಟಿಗಳು ಹಾಗು ಎರಡು ಮೀನುಗಳನ್ನು 5,000 ಜನರಿಗೆ ಬಡಿಸುವಂತೆ ಕರ್ತನು ತನ್ನ ಶಿಷ್ಯರಿಗೆ ಹೇಳಿದ ಸಂದರ್ಭವು ಇದಕ್ಕೆ ಸೂಕ್ತ ಉದಾಹರಣೆಯಾಗಿರುತ್ತದೆ. ಅನೇಕರು ತಮ್ಮ ಕುಟುಂಬ ಸಮಸ್ಯೆಗಳನ್ನು, ಸಾಲ ಹಾಗು ಅನಾರೋಗ್ಯವನ್ನು ದೊಡ್ಡದು ಮಾಡಿಕೊಂಡು ಪ್ರಾರ್ಥನೆ ಮಾಡದೆ ಇರುವದಕ್ಕೆ ಇದನ್ನು ಕಾರಣವಾಗಿ ಹೇಳಿ, ಕರ್ತನು ತಮ್ಮನ್ನು ಗುಣಪಡಿಸಿದರೆ ಇತರರಿಗೋಸ್ಕರ ಪ್ರಾರ್ಥನೆ ಮಾಡಲು ತಮ್ಮಲ್ಲಿ ನಂಬಿಕೆ ಉಂಟಾಗುತ್ತದೆ ಎಂದು ಹೇಳುತ್ತಾರೆ. ಮೇಲೆ ಹೇಳಿರುವ ಸಂದರ್ಭದಲ್ಲಿ... ಹೇಗೆ 5,000 ಜನರು ಮೂರು ದಿನಗಳು ಊಟಮಾಡದೆ ಇದ್ದರೋ ಅದೇ ರೀತಿ ಕರ್ತನ ಶಿಷ್ಯರು ಸಹ ಹಸಿವೆಯಿಂದಿದ್ದರು. ಕರ್ತನು ತಾವು ಹಸಿವೆಯಿಂದಿದ್ದರೂ ಇತರರಿಗೆ ಬಡಿಸಿರಿ ಎಂದು ಹೇಳಿದನು... ಆದರೆ ಕೊನೆಯಲ್ಲಿ ನೋಡಿದಾಗ ಶಿಷ್ಯರು ಉಳಿದ ರೊಟ್ಟಿಯ ತುಂಡುಗಳನ್ನು ಹನ್ನೆರಡು ಪುಟ್ಟಿಗಳಲ್ಲಿ ತುಂಬಿದರು. ಮೊದಲು ಊಟಮಾಡಿದವನಿಗೆ ಒಂದು ಹೊತ್ತು ಊಟ ಸಿಕ್ಕಿತು ಅಷ್ಟೇ. ಆದರೆ ಇತರರಿಗೆ ಬಡಿಸಿದವರಿಗೆ ಒಂದು ಪುಟ್ಟಿ ತುಂಬಾ ದೊರಕಿತು. ಇದು ಕರ್ತನು ಮಾಡುವ ರೀತಿ... ನಿಮ್ಮ ಪರಿಸ್ಥಿತಿ (ಸಮಸ್ಯೆಗಳು) ಯನ್ನು ಬದಿಗಿಟ್ಟು ಇತರರಿಗೋಸ್ಕರ ಪ್ರಾರ್ಥಿಸಿದಾಗ, ಕರ್ತನು ನಿಮ್ಮ ಪುಟ್ಟಿಯನ್ನು ತುಂಬಿಸುತ್ತಾನೆ.


ಪರರಿಗೋಸ್ಕರ ಪ್ರಾರ್ಥನೆ ಮಾಡಲು ಕಾರಣವನ್ನು ಯೋಬನ ಪುಸ್ತಕದಲ್ಲಿ ಕಾಣಬಹುದು. ತಾನು ಅನುಭವಿಸುತ್ತಿದ್ದ ವೇದನೆ ಸಂಕಷ್ಟಗಳನ್ನು ಬದಿಗಿಟ್ಟು ಇತರರಿಗೋಸ್ಕರ ಪ್ರಾರ್ಥನೆ ಮಾಡು ಎಂದು ಕರ್ತನು ಆತನಿಗೆ ಆಜ್ಞಾಪಿಸಿದನು. ಸತ್ಯವೇದ ಹೇಳುತ್ತದೆ, "ಯೋಬನು ತನ್ನ ಸ್ನೇಹಿತರಿಗೋಸ್ಕರ ಪ್ರಾರ್ಥಿಸಿದ ಬಳಿಕ ಯೆಹೋವನು ಅವನ ದುಸ್ಥಿತಿಯನ್ನು ಹೋಗಲಾಡಿಸಿ ..." (ಯೋಬನು 42:10). ನೀವು, ನಿಮ್ಮ ಕುಟುಂಬ ಬಂಧನದಲ್ಲಿರಬಹುದು. ಆದರೆ ನೀವು ಪರರಿಗೋಸ್ಕರ ಪ್ರಾರ್ಥನೆ ಮಾಡಿದಾಗ, ಕರ್ತನು ನಿಮಗೆ ಬಿಡುಗಡೆಯನ್ನು ಕೊಟ್ಟು ಕಳೆದುಕೊಂಡ ಎಲ್ಲವನ್ನು ಹಿಂದಕ್ಕೆ ಕೊಡುತ್ತಾನೆ. ಒಬ್ಬ ವ್ಯಕ್ತಿ ನಿಸ್ವಾರ್ಥ ಹೃದಯದಿಂದ ಪರರಿಗೋಸ್ಕರ ಯಥಾರ್ಥವಾಗಿ ಪ್ರಾರ್ಥನೆ ಮಾಡಿದಾಗ, ಆತನು ಬಿಡುಗಡೆಗೂ ಆಶೀರ್ವಾದಕ್ಕೂ ಯೋಗ್ಯನಾಗುವನು. ಎಲ್ಲಕ್ಕಿಂತ ಹೆಚ್ಚಾಗಿ ಕರ್ತನಾದ ಯೇಸು ಕ್ರಿಸ್ತನು ಹೇಳಿದ್ದಾನೆ, "ಆದರೆ ಬರುವದಕ್ಕಿರುವ ಇವೆಲ್ಲವುಗಳೊಳಗಿಂದ ತಪ್ಪಿಸಿಕೊಳ್ಳುವದಕ್ಕೂ ಮನುಷ್ಯಕುಮಾರನ ಮುಂದೆ ನಿಂತುಕೊಳ್ಳುವದಕ್ಕೂ ನೀವು ಪೂರ್ಣ ಶಕ್ತರಾಗುವಂತೆ ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆ ಮಾಡಿಕೊಳ್ಳುತ್ತಾ ಎಚ್ಚರವಾಗಿರ್ರಿ" (ಲೂಕ 21:36). ಆದ್ದರಿಂದ ಲೋಕದ ಎಲ್ಲಾ ಕೆಟ್ಟತನದಿಂದ ಸಂರಕ್ಷಿಸಲ್ಪಡಲು ನಾವು ಯಾವಾಗಲೂ ಪ್ರಾರ್ಥನೆ ಮಾಡಬೇಕಾದ್ದು ಬಹಳ ಅಗತ್ಯ. ಈ ಪ್ರಾರ್ಥನೆಗಳು ಸಾಧಾರಣವಾದ ಪ್ರಾರ್ಥನೆಗಳಲ್ಲ. ಇವು ಕರ್ತನ ಮುಂದೆ ನಿಮ್ಮನ್ನು ಯೋಗ್ಯರನ್ನಾಗಿ ನಿಲ್ಲಿಸುವಂಥ ಪ್ರಾರ್ಥನೆಗಳು. ಆದ್ದರಿಂದ ಇತರರಿಗೋಸ್ಕರ ಅತ್ತು, ಕಣ್ಣೀರು ಸುರಿಸಿ, ಗೋಳಾಡಿ ಪ್ರಾರ್ಥಿಸಿರಿ. ಕರ್ತನು ನೀಡುವ ಭಾರದಿಂದಲೂ ಪವಿತ್ರಾತ್ಮಭರಿತರಾಗಿಯೂ ಪ್ರಾರ್ಥನೆ ಮಾಡಿರಿ.

**- ವಿನ್ಸೆಂಟ್ ಸೆಲ್ವಕುಮಾರ್**



**"(ಯೇಸು) ರೊಟ್ಟಿಗಳನ್ನು ಮುರಿದು ಶಿಷ್ಯರಿಗೆ ಕೊಟ್ಟನು; ಶಿಷ್ಯರು ಜನರ ಗುಂಪಿಗೆ ಕೊಟ್ಟರು; ಅವರೆಲ್ಲರೂ ಊಟಮಾಡಿ ತೃಪ್ತರಾದರು. ಮಿಕ್ಕ ತುಂಡುಗಳನ್ನು ಕೂಡಿಸಲಾಗಿ ಹನ್ನೆರಡು ಪುಟ್ಟಿ ತುಂಬಿತು" (ಮತ್ತಾ 14:19-21).**

> *"ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿವಂತನ ಅತ್ಯಾಸಕ್ತಿಯುಳ್ಳ ಪ್ರಾರ್ಥನೆ ಬಹು ಬಲವಾಗಿದೆ" (ಯಾಕೋಬ 5:16).*





**ಹಿಂಸೆಯಲ್ಲಿ ತಾಳ್ಮೆಯುಳ್ಳವರಾಗಿಯೂ, ಎಡಬಿಡದೆ ಪ್ರಾರ್ಥನೆ ಮಾಡುವವರಾಗಿಯೂ ಇರ್ರಿ.**

# ಭಾರತ ದೇಶಕ್ಕಾಗಿ ಪ್ರಾರ್ಥಿಸಿರಿ

## ಎಚ್ಚರವಾಗಿದ್ದು ಪ್ರಾರ್ಥನೆಯನ್ನು ತಪ್ಪದೆ ಮಾಡುವವರಾಗಿರಿ!

1. ದುರಾತ್ಮಗಳು ಎದ್ದು, ಬೇಸಾಯವೇ ತಮ್ಮ ಜೀವನೋಪಾಯವಾಗಿರುವ ರೈತರ ಜೀವನಗಳನ್ನು ಹಾಳುಮಾಡಲು, ರೈತರು ತಮ ಕಷ್ಟಾರ್ಜಿವನ್ನು ಅನುಭವಿಸದಂತೆ ಅದು ವ್ಯರ್ಥವಾಗುವಂತೆ ಅನೇಕ ದುಷ್ಟ ಯೋಜನೆಗಳನ್ನು ಹಾಕುತ್ತಿವೆ. ಅವು ತಮ್ಮ ಕಾರ್ಯವನ್ನು ಈಗಾಗಲೆ ಪ್ರಾರಂಭಿಸಿವೆ. ಇನ್ನು ನೀವು ತಡಮಾಡಲು ಸಾಧ್ಯವಿಲ್ಲ; ಹೊರಡಿರಿ. ನಾನು ಇದಕ್ಕೆ ಒಪ್ಪಿಕೊಂಡ ಕಾರಣ ಅವು ತಮ್ಮನ್ನು ಬಯಲುಮಾಡಿಕೊಳ್ಳುತ್ತವೆ. ಅವು ತಮ್ಮನ್ನು ನಿಮಗೆ ಬಯಲುಮಾಡಿಕೊಂಡಾಗ ನೀವು ಅವುಗಳನ್ನು ಗುರುತಿಸುತ್ತೀರಿ. ಆಗ ನೀವು ನಿಮ್ಮ ಯುದ್ಧವನ್ನು ಪ್ರಾರಂಭಿಸಿ ಅವುಗಳನ್ನು ನಾಶಮಾಡುವಿರಿ ಎಂದು ಸೇನಾಧೀಶ್ವರನಾದ ಕರ್ತನು ಹೇಳುತ್ತಿದ್ದಾನೆ. ಒಂದು ವೇಳೆ ನೀವು ಇದನ್ನು ಮಾಡದಿದ್ದರೆ ಮರಣವು ನಿಮ್ಮ ದೇಶದ ರೈತರ ನಿವಾಸಗಳ ಮೇಲೆ ಬೀಳುತ್ತದೆ.

2. ಜನರನ್ನು ನುಂಗಲು ಹಾಗು ತಮ್ಮ ಕಷ್ಟಾರ್ಜಿತದ ಫಲವನ್ನು ಅವರು ಅನುಭವಿಸದಂತೆ ಮಾಡಲು ಹಾಗು ಅವರ ರಕ್ತವನ್ನು ಹೀರಿಕೊಳ್ಳಲು ಹಸಿವೆಗೊಂಡಿರುವ ತೋಳಗಳು ತಂಡೋಪತಂಡವಾಗಿ ಬಂದಿವೆ. ಜನರ ಎಲುಬುಗಳಲ್ಲಿನ ಕೊಬ್ಬನ್ನು ತಿನ್ನಲು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷಿಗಳು ಸಹ ನಿಮ್ಮ ದೇಶದ ಮೇಲೆ ಬಂದಿವೆ. ನಿಮ್ಮ ದೇಶವನ್ನಾಳುವ ನಾಯಕರು ಜನರ ಕ್ಷೇಮಾಭ್ಯುದಯವನ್ನು ಗ್ರಹಿಸದೆ ಇರುವದರಿಂದ ಜನರ ಕಷ್ಟವನ್ನು



**"ಸ್ವಂತ ಲಾಭಕ್ಕಾಗಿ ಬಡವರನ್ನು ಹಿಂಸಿಸುವವರಿಗೂ ಬಲ್ಲಿದರಿಗೆ ಲಂಚಕೊಡುವವರಿಗೂ ಕೊರತೆಯೇ ಗತಿ" (ಜ್ಞಾನೋಕ್ತಿಗಳು 22:16).**



ತಿಳಿಯದೆ ಇರುವದರಿಂದ ನಿಮ್ಮ ದೇಶವು ತನ್ನ ಜೀವವನ್ನು ಕಳೆದುಕೊಂಡಿಲ್ಲವೇ? ಧನವಂತರ, ಅತಿ ಶ್ರೀಮಂತರ ಕೃತ್ಯಗಳಿಂದ ದೇಶವು ಹಾಳಾಗುತ್ತಿಲ್ಲವೇ? ಇವರು ತಮ್ಮ ಬೆರಳುಗಳಿಂದ ಯಾವ ಕೆಲಸವನ್ನೂ ಮುಟ್ಟುವದಿಲ್ಲ ಆದರೆ ಬಡವರ ಜೀವವನ್ನೇ ಹೀರುತ್ತಾರೆ. ಇಂಥವರನ್ನು ಪ್ರೇರೇಪಿಸಿ ಎಬ್ಬಿಸುವಂಥಹ ದುರಾತ್ಮಗಳು ನಿಮ್ಮ ದೇಶದಲ್ಲಿ ಅನೇಕರಷ್ಟು ಹೆಚ್ಚಿವೆ... ಕರ್ತನು ಈ ರೀತಿ ಹೇಳುತ್ತಿದ್ದಾನೆ, ''ಈ ದುರಾತ್ಮಗಳನ್ನು ಬಂಧಿಸಬೇಕು'' (ತುತೂರಿಯ ಸ್ವರ 13.06.2012).

3. ದೇಶಕ್ಕಾಗಿ ಅಳುವದಕ್ಕಾಗಿ ಯಾರೂ ಇಲ್ಲ. ದೇಶಕ್ಕಾಗಿ ಅಳುವ ವ್ಯಕ್ತಿಗಳು ಬಹಳ ಕಡಿಮೆ ಹಾಗು ಅವರು ಸುರಿಸುವ ಕಣ್ಣೀರು ಸ್ವಲ್ಪವೇ ಆಗಿದೆ. ಅವರ ಹೊಟ್ಟೆಗಳು ಆಹಾರದಿಂದ ತುಂಬಿವೆ ಆದರೆ ಉಪವಾಸದಿಂದ ಅವು ಕುಗ್ಗಲಿಲ್ಲ. ಹೀಗಾಗಿ ಅವರಿಗೆ ಭಾರವುಳ್ಳ ಹೃದಯದಿಂದ ಮೊಣಕಾಲೂರಿ ಪ್ರಾರ್ಥನೆ ಮಾಡಲು ಆಗುತ್ತಿಲ್ಲ ಹಾಗು ಅದನ್ನು ಕುರಿತು ಅವರಿಗೆ ಅಕ್ಕರೆಯೂ ಇಲ್ಲ. ಅವರ ಪ್ರಾರ್ಥನೆಯಲ್ಲಿ ಆತ್ಮಭಾರವಿಲ್ಲ ಬದಲಿಗೆ ಕೇವಲ ಶಬ್ದ ಮಾತ್ರ ಉಂಟು. ಪ್ರತಿ ವ್ಯಕ್ತಿ ತನ್ನ ಹೆಸರು ಪ್ರಖ್ಯಾತಿಗಾಗಿ ಹುಡುಕುತ್ತಿದ್ದಾನೆ. ಹೀಗಿರುವಲ್ಲಿ ದೇಶವು ಅಭಿವೃದ್ಧಿ ಹೊಂದಲು ಸಾಧ್ಯವೇ? ಸಾಕಷ್ಟು ವಿಜ್ಞಾಪನೆ ಹಾಗು ದೈವಿಕ ಅಳಲು ಇಲ್ಲದೆ ದೇಶದ ಸಂಕೋಲೆಗಳನ್ನು ಮುರಿಯಲು ಸಾಧ್ಯವೇ?'' ಎಂದು ಕರ್ತನು ಕೇಳುತ್ತಿದ್ದಾನೆ (ತುತೂರಿಯ ಸ್ವರ 16.10.2012).

"

''ಬಡವರಿಗೆ ದಯೆತೋರಿಸುವವನು ಯೆಹೋವನಿಗೆ ಸಾಲಕೊಡುವವನು; ಆ ಉಪಕಾರಕ್ಕೆ ಯೆಹೋವನೇ ಪ್ರತ್ಯುಪಕಾರಮಾಡುವನು'' (ಜ್ಞಾನೋಕ್ತಿಗಳು 19:17).



# ಕರ್ನಾಟಕ ರಾಜ್ಯಕ್ಕಾಗಿ ಪ್ರಾರ್ಥಿಸಿರಿ!





*"ನೀನಂತೂ ಹೆದರಬೇಡ, ನಾನೇ ನಿನ್ನೊಂದಿಗಿದ್ದೇನೆ; ದಿಗ್ಭ್ರಮೆಗೊಳ್ಳದಿರು, ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲಪಡಿಸುತ್ತೇನೆ; ಹೌದು, ನಿನಗೆ ಸಹಾಯಕೊಡುತ್ತೇನೆ; ನನ್ನ ಧರ್ಮದ ಬಲಗೈಯನ್ನು ನಿನಗೆ ಆಧಾರಮಾಡುತ್ತೇನೆ (ಯೆಶಾ 41:10).*

ಮಹಿಳೆಯರ ವಿರುದ್ಧ ಕಾರ್ಯಮಾಡುತ್ತಿರುವ ವೇಶ್ಯೆತನದ ಆತ್ಮದುಷ್ಟ ಜನರನ್ನು ಎಬ್ಬಿಸಿ ಪಟ್ಟಣದಾದ್ಯಂತ ಅದು ಮರೆಯಾಗಿ ಕಾಯುತ್ತಿದೆ. ಮುಂಬರುವ ದಿನಗಳಲ್ಲಿ ಅದು ಅತಿ ಕ್ರೂರವಾಗುತ್ತದೆ. ಅದು ಹೆಣ್ಣು ಮಕ್ಕಳಿಗೆ ವಿರುದ್ಧವಾಗಿ ಕಾರ್ಯಮಾಡುತ್ತದೆ. ಅವರ ಯೌವನ ಕಾಲದಲ್ಲಿ ಹಾಗು ಮಹಿಳೆಯರಿಗೆ ವಿರುದ್ಧವಾಗಿ ಕಾರ್ಯಮಾಡುತ್ತದೆ. ಅವರನ್ನು ಕೊಲ್ಲುವದಕ್ಕಾಗಿ, ಹಾಳುಮಾಡುವದಕ್ಕಾಗಿ, ಅವರನ್ನು ಅಸಹ್ಯಗೊಳಿಸುವದಕ್ಕಾಗಿ ಹಾಗು ಅಶುದ್ಧಮಾಡುವದಕ್ಕಾಗಿ, ಅವರ ದೇಹಗಳನ್ನು ಬೀದಿಗಳಲ್ಲಿ ಎಸೆಯುವದಕ್ಕಾಗಿ ಅದು ಸ್ತ್ರೀಯರ ವಿರುದ್ಧ ಏಳುತ್ತದೆ. ರಕ್ತಕ್ಕಾಗಿ ದಾಹಗೊಂಡಿರುವ ಈ ದುರಾತ್ಮಗ್ರಳನ್ನು ಬಂಧಿಸುವದು ಒಳ್ಳೆಯದು' ಎಂದು ಕರ್ತನು ಹೇಳುತ್ತಿದ್ದಾನೆ... (ಮೈಸೂರಿನಲ್ಲಿ ಪ್ರಕಟಿಸಲಾದ ಪ್ರವಾದನೆ ಫೆಬ್ರವರಿ 14, 2015).

**2. “ನೀವು ಅಂಜಬೇಡಿರಿ; ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ” (ವಿಮೋಚನ 14:13).**

ಮೂರು ದುರಾತ್ಮಗಳು... ಈ ಮೂರು ಆತ್ಮಗಳು ಬಡಿದುಕೊಳ್ಳುತ್ತಾ ಪಟ್ಟಣವನ್ನು ಹಾಗು ರಾಜ್ಯವನ್ನು ತಮ್ಮ ಶಕ್ತಿ ಪರಾಕ್ರಮದಿಂದ ಸೆರೆಹಿಡಿಯಲು ಕಾದಿವೆ. ಇದಕ್ಕೆ ಅವುಗಳಿಗೆ ಮನುಷ್ಯರ ರಕ್ತ ಅಗತ್ಯ ಆದ್ದರಿಂದ, ತಮ್ಮ ಈ ಉದ್ದೇಶವನ್ನು ನೆರವೇರಿಸಿಕೊಳ್ಳಲು ಅವು ಅನೇಕ ದುಷ್ಟ ಕುತಂತ್ರಗಳನ್ನು ಪ್ರಯೋಗಿಸಲು ಹೊಂಚುಹಾಕುತ್ತಿವೆ. ಅನೇಕ ಮಂದಿ ಕೊಲೆಗಾರರು ಎದ್ದೇಳಲಿದ್ದಾರೆ. ಅನೇಕ ರಕ್ತ ದಾಹಹೊಂದಿರುವ ದುಷ್ಟರು ಎದ್ದೇಳುವರು. ಈ ಆತ್ಮಗಳು ಅನೇಕ ಜನರನ್ನು ಕೊಲ್ಲುತ್ತವೆ. ಅದರಲ್ಲೂ ವಿಶೇಷವಾಗಿ ಅವುಗಳಿಗೆ ಮಹಿಳೆಯರ ರಕ್ತ ಅಗತ್ಯ.

ದೇವರಾದ ಕರ್ತನು ಹೇಳುತ್ತಿದ್ದಾನೆ; “ನನ್ನ ಜನರೇ ಎದ್ದೇಳಿರಿ! ಈ ದುರಾತ್ಮಗಳು ತಮ್ಮ ಕ್ರಿಯೆಗಳನ್ನು ಪ್ರಾರಂಭಿಸುವದಕ್ಕೆ ಮುಂಚೆ ಅವುಗಳನ್ನು ಬಂಧಿಸಬೇಕು” ಇಲ್ಲದಿದ್ದರೆ ನಿಮ್ಮ ರಾಜ್ಯದಲ್ಲಿ ಅಳಲು ಗೋಳಾಟವೂ ಇರುತ್ತದೆ, ಅನೇಕ ಮಹಾ ದುರಂತಗಳು ನಡೆಯುತ್ತವೆ, ನೂರಾರು ಜನರು ನಾಶವಾಗುವದನ್ನು ನೋಡುವಿರಿ. ನಿಮ್ಮ ರಾಜ್ಯದಲ್ಲಿ ಅನೇಕ ಸ್ಥಳಗಳಲ್ಲಿ ಮಹಿಳೆಯರನ್ನು ಅತಿ ಘೋರವಾಗಿ ನಡಿಸಲಾಗುತ್ತಿರುವ ದೃಶ್ಯಗಳನ್ನು ನೋಡುವಿರಿ. ಮುಂಬರುವ ದಿನಗಳಲ್ಲಿ ಇದು ಅತಿ ವೇಗವಾಗಿ ನಡೆಯುವದನ್ನು ನೋಡುವಿರಿ. (ಮೈಸೂರಿನಲ್ಲಿ ಪ್ರಕಟಿಸಲಾದ ಪ್ರವಾದನೆ, ಫೆಬ್ರವರಿ 14, 2015).

3. ನಮ್ರತೆಯುಳ್ಳ ಒಳ್ಳೆಯ ಮಂತ್ರಿಗಳು ಯಾವ ಸುಳಿವು ಸಹ ಇಲ್ಲದೆ ನಾಶವಾಗುತ್ತಾರೆ. ಅವರನ್ನು ಎಷ್ಟು ಹುಡುಕಿದರೂ ಅವರ ಸುಳಿವೇ ಸಿಕ್ಕುವದಿಲ್ಲ. ರಾಜ್ಯದ ಮಂತ್ರಿಗಳ ವಿರುದ್ಧ ಈ ದುಷ್ಟರ ಆಲೋಚನೆಗಳು ಅತಿ ಭಯಂಕರವಾಗಿವೆ. ಎಚ್ಚರ! ಅನೇಕ ಮಂತ್ರಿ ಪದವಿ ಸ್ಥಾನಗಳಲ್ಲಿ ವಿರೋಧಿಯು ದೇವರಿಗೆ ವಿರುದ್ಧವಾದ ಅನೇಕ ಕಾರ್ಯಗಳನ್ನು ಸ್ಥಾಪಿಸಲಿದ್ದಾನೆ. ದುಷ್ಟರು ಅನೇಕ ಸ್ಥಳಗಳನ್ನು ಆವರಿಸಲಿದ್ದಾರೆ. ಕರ್ತನಾದ ದೇವರು ಹೇಳುತ್ತಿದ್ದಾನೆ; “ಅವನ ಓಟ ಪ್ರಾರಂಭವಾಗುವದಕ್ಕೆ ಮುಂಚೆ ನಿಮ್ಮ ಓಟ ಪ್ರಾರಂಭವಾಗುವದು ಉತ್ತಮ” ಯಾರ ಓಟ? ಎಂದು ನೀವು ಕೇಳಬಹುದು, ಕರ್ತನಾದ ನಾನು ಹೇಳುತ್ತಿದ್ದೇನೆ, ಪ್ರಾರ್ಥನೆ ಮಾಡುವ ವ್ಯಕ್ತಿಯ ಓಟ ಪ್ರಾರಂಭವಾಗಬೇಕು. ಪೌಳಿಯ ಒಡಕಿನಲ್ಲಿ ನಿಂತು ಪ್ರಾರ್ಥನೆ ಮಾಡುವ ವ್ಯಕ್ತಿಯ ಓಟ ಮೊದಲು ಪ್ರಾರಂಭವಾಗಬೇಕು. ನಂತರ ನನ್ನ ಸಭೆಗಳು ಸಂರಕ್ಷಿಸಲ್ಪಡುತ್ತವೆ. ಆ ನಂತರ ನನ್ನ ಕುರಿಗಳು ಸಂರಕ್ಷಿಸಲ್ಪಡುತ್ತವೆ. (ಮೈಸೂರಿನಲ್ಲಿ ಪ್ರಕಟಿಸಲಾದ ಪ್ರವಾದನೆ, ಫೆಬ್ರವರಿ 14, 2015).



“ಬನ್ನಿರಿ ನಮ್ಮ ನಿರ್ಮಾಣಿಕನಾದ ಯೆಹೋವನಿಗೆ ಸಾಷ್ಟಾಂಗವೆರಗಿ ಆರಾಧಿಸೋಣ” (ಕೀರ್ತನೆ 95:6).

# ನಮ್ಮ ದೇವ ಸೇವಕರಿಗಾಗಿ ಪ್ರಾರ್ಥಿಸಿರಿ!



## ಪ್ರವಾದಿ ವಿನ್ಸೆಂಟ್ ಸೆಲ್ವ ಕುಮಾರ್

ಪ್ರವಾದಿ ವಿನ್ಸೆಂಟ್ ಸೆಲ್ವ ಕುಮಾರ್ ಅವರ ಸಂದೇಶಗಳು ಕರ್ತನಿಗೆ ಹತ್ತಿರವಾಗಿ ನಡೆದುಕೊಂಡು ಹಳೆಯ ಒಡಂಬಡಿಕೆ ಪ್ರವಾದಿಗಳಿಗೆ ಹೋಲಿಕೆ ಯಾಗಿದೆ. ಅವರ ಮುಖ್ಯ ಸೇವೆ ಯಾವುದೆಂದರೆ ಕರ್ತನ ಸನ್ನಿಧಿಯಲ್ಲಿ ಕಾದಿದ್ದು ಆತನ ಬಳಿಯಿಂದ ಪ್ರಕಟನೆಗಳನ್ನು ಸ್ವೀಕರಿಸುವುದೇ ಆಗಿದೆ ಆದ್ದ-ರಿಂದ ಅವರು ಕರ್ತನ ಪ್ರಸನ್ನತೆಯನ್ನು ಕಾದಿದ್ದು ಸೇವೆಗಳನ್ನು ಪೂರೈಸುವಂತೆ ಕರ್ತನು ಅವರನ್ನು ಪ್ರತಿಕ್ಷಣ ಸಂರಕ್ಷಿಸಿ ಕಾಪಾಡಿ ನಡೆಸುವಂತೆ ಪಾರ್ಥಿಸಿರಿ ಕರ್ತನ ಸೇವಕರನ್ನು ಎಲ್ಲ ಕೆಡುಕುಗಳಿಂದ ಕಾಪಾಡುವಂತೆ ಪ್ರಾರ್ಥಿಸಿರಿ ಒಬ್ಬ ದೇವ ಸೇವಕನು ಉಪ ದೇವ ಸೇವಕನು ಪ್ರವಾದಿಯ ಕರೆಯನ್ನು ಹೊಂದಿರುವುದು ಸೈತಾನನಿಗೆ ಇಷ್ಟವಿಲ್ಲದ ಕಾರ್ಯ ಆದ್ದರಿಂದ ಅವರು ಒಬ್ಬ ಪ್ರವಾದಿಯ ಜೀವನವನ್ನು ಹಾಳು ಮಾಡಲು ಅಥವಾ ಅವರ ಹೆಸರನ್ನು ಖ್ಯಾತಿಯನ್ನು ಕೆಡಿಸಲು ಏನು ಬೇಕಾದರೂ ಮಾಡುವನು ಸೈತಾನನ ಕುತಂತ್ರಗಳು ಸಾಧಿಸುವಂತೆ ಕಾಪಾಡುವಂತೆ ಪ್ರಾರ್ಥಿಸಿರಿ.



## ಸಹೋ. ಮೋಹನ್ ಸಿ. ಲಾಜರಸ್

ಸಹೋ. ಮೋಹನ್ ಸಿ. ಲಾಜರಸ್ ಅವರು ಕಳದ 43 ವರ್ಷಗಳಿಂದ ಕರ್ತನ ಸೇವೆ ಮಾಡುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಅವರು ದೇವರ ರಾಜ್ಯಕ್ಕಾಗಿ ಅನೇಕ ಕಾರ್ಯಗಳನ್ನು ಸಧಿಸಿ, ಹೆಚ್ಚಿನ ಬೆಳೆಯನ್ನು ಆತನ ಕೊಟ್ಟಿಗೆಯಲ್ಲಿ ಸೇರಿಸಲು ಕರ್ತನು ಅವರಿಗೆ ಬೇಕಾದ ಸಹಾಯವನ್ನು ಒದಗಿಸಿ ನಡಿಸುವಂತೆ ಪ್ರಾರ್ಥಿಸಿರಿ.

ವರ್ಷಗಳು ಕಳಿದಂತೆ ಈಗ ಅವರ ಉಜ್ಜೀವನ ದರ್ಶನ ಅವರ ಸೇವೆಯ ಕರೆಯಾಗಿ ಮಾರ್ಪಟ್ಟಿದೆ ಹಾಗು ಕರ್ತನು ಅವರ ಸೇವೆಯ ಮೂಲಕ ಮಹಾ ದೊಡ್ಡ ಉಜ್ಜೀವನ ಉಂಟಾಗಲಿದೆ ಎಂದು ವಾಗ್ದಾನ ಮಾದಿದ್ದಾನೆ. ಹೀಗಾಗಿ ಕರ್ತನು ಸಹೋ.ಮೋಹನ್ ಸಿ. ಲಾಜರಸ್ ಅವರನ್ನು ಹಾಗು ಅವರ ಸೇವೆಯನ್ನು ಸೈತಾನನ ಕುತಂತ್ರಗಳಿಂದ ಕೇಡುಗಳಿಂದ ತಪ್ಪಿಸಿ ಕಾಪಾಡಬೇಕೆಂದು ಪ್ರಾರ್ಥಸಿರಿ ಹಾಗು ಅವರ ಜೀವನದಲ್ಲಿ ಹಾಗು ಸೇವೆಯಲ್ಲಿ ಕರ್ತನ ಚಿತ್ತ ಆತನ ಯೋಜನೆಗಳು ಹಾಗು ವಾಗ್ದಾನಗಳು ನೆರೆವೇರುವಂತೆ ಭಾರದಿಂದ ಪ್ರಾರ್ಥಿಸಿರಿ.

## evangel OTT PLATFORM

1. ಓಟಿಟಿ ಮೂಲಕ ಪ್ರಸಾರವಾಗುತ್ತಿರುವ ಕಾರ್ಯಕ್ರಮಗಳನ್ನು ವಿರೋಧಿಯಾದ ಸೈತಾನನು ತಡೆಹಾಕಿ ಹಾಳುಮಾಡದಂತೆ ಪ್ರಾರ್ಥಿಸಿರಿ. ಓಟಿಟಿ ವಿಭಾಗದಲ್ಲಿ ಶ್ರಮಿಸುತ್ತಿರುವ ತಂತ್ರಜ್ಞರು ಹಾಗು ಎಂಜಿನಿಯರ್ಗಳನ್ನು ಕರ್ತನು ಆಶೀರ್ವದಿಸಿ, ವೀಕ್ಷಕರು/ಚಂದಾದಾರರು ಸಂದೇಶಗಳನ್ನು ನೋಡಿ ಕೇಳಿದ ಕೂಡಲೆ ಕರ್ತನಿಗೆ ಹತ್ತಿರವಾಗುವಂತೆ ಪ್ರಾರ್ಥನೆ ಮಾಡಿ.

2. ಕರ್ತನು ತನ್ನ ಜನರನ್ನು ತನ್ನ ಸೇವಕರನ್ನು ಎಬ್ಬಿಸಿ, ಅವರು OTT ಮೂಲಕ ಕರ್ತನ ಸಂದೇಶಗಳನ್ನು ಹಂಚಿ ಆತನ ಕುರಿಗಳನ್ನು ನಡಿಸುವಂತೆ ನಮ್ಮ ಕೈಗಳನ್ನೆತ್ತಿ ಪ್ರಾರ್ಥಿಸೋಣ. ದೇವ ಸೇವಕರು ಹಂಚುವಂಥ ಪ್ರತಿ ಸಂದೇಶ ದೇವರ ಚಿತ್ತವನ್ನು, ಆತನ ಉದ್ದೇಶವನ್ನು ನೆರವೇರಿಸುವಂಥದ್ದಾಗಿರಬೇಕು.

3. ಎಲ್ಲಾ ಉಪಕರಣಗಳು, ಗ್ಯಾಜೆಟ್‌ಗಳು (ಫೋನ್, ಲ್ಯಾಪ್‌ಟಾಪ್ ಮುಂತಾದವುಗಳು) ಸಾಫ್ಟ್‌ವೇರ್, ಕ್ಲೌಡ್ ಸಂಬಂಧಿತ ಸಂಸ್ಥೆಗಳು OTT ಚೆನ್ನಾಗಿ ಕೆಲಸ ಮಾಡಲು ಸಹಾಯಕವಾಗಿರುವಂತೆ ಈ ಎಲ್ಲಾದರ ಮೇಲೆ ದೇವರ ಸಂರಕ್ಷಣೆ ಇರುವಂತೆ ಪ್ರಾರ್ಥಿಸಿರಿ. ಕಡೆಯ ಕಾಲದಲ್ಲಿ ಸಭೆಗಳ ಮೇಲೆ ಕಟ್ಟುನಿಟ್ಟಾದ ದೃಷ್ಟಿ ಇಡುವ ಸಾಧ್ಯತೆಗಳಿರುತ್ತವೆ ಹಾಗು ಅನೇಕ ಕಾರಣಗಳನ್ನು ಹೇಳಿ ಸಭೆಗಳನ್ನು ಮುಚ್ಚಬೇಕೆಂದು ಆಜ್ಞಾಪಿಸಲೂ ಬಹುದು. ಇಂಥಾ ಪರಿಸ್ಥಿತಿಗಳಲ್ಲಿ OTT ವೇದಿಕೆ ಮಾತ್ರ ಲಭ್ಯವಾಗಿರುವ ಮಾಧ್ಯಮವಾಗಿರುತ್ತದೆ. ಹೀಗಾಗಿ OTT ಯು ಸುರಕ್ಷಿತವಾಗಿ, ತಡೆಯಿಲ್ಲದೆ ಕಾರ್ಯಮಾಡುವಂತೆ ಪ್ರಾರ್ಥನೆ ಮಾಡಿರಿ.

# ಯೇಸುವಿನ ಧ್ವನಿ ಸೇವೆ

## ಪ್ರಾರ್ಥನಾ ಅಂಶಗಳು



Prophetic Centre

ಕರ್ತನು ಪ್ರವಾದನಾ ಕೇಂದ್ರವನ್ನು ತನ್ನ ಪ್ರಸನ್ನತೆಯಿಂದ ತುಂಬುವಂತೆ ಹಾಗು ನಾವು ಆತನ ದೂತರು ಹಾಗು ಸಂತರೊಂದಿಗೆ ಸೇರಿ ಆತನ ಉದ್ದೇಶಗಳನ್ನು ನೆರವೇರಿಸುಂತೆ ಪ್ರಾರ್ಥಿಸಿರಿ. ಪ್ರವಾದನಾ ಕೇಂದ್ರದ ಮೇಲೆ ಕರ್ತನ ಸಂರಕ್ಷಣೆ ಹಾಗು ಆಡಳಿತ ನೆಲೆಗೊಳ್ಳುವಂತೆ ಪ್ರಾರ್ಥಿಸಿರಿ. ಯಾಕಂದರೆ, ಈ ಸ್ಥಳದಲ್ಲಿ ಕರ್ತನು ತನ್ನ ರಹಸ್ಯಗಳನ್ನು ಹಾಗು ಕಡೆಯ ಕಾಲದ ಯೋಜನೆಗಳನ್ನು ಬಯಲುಮಾಡುವಂಥ ಸ್ಥಳವಾಗಿದೆ. ಈ ಕೇಂದ್ರದಲ್ಲಿ ಹಾಗು ಇದರ ಕಚೇರಿಯಲ್ಲಿ ಕೆಲಸ ಕಾರ್ಯಗಳಲ್ಲಿ ಬೆಂಬಲ ನೀಡಲು ಹಾಗು ಸಹಾಯ ಮಾಡಲು ಕರ್ತನು ಜನರನ್ನು ಎಬ್ಬಿಸುವಂತೆಯೂ ಇದರ ಎಲ್ಲಾ ಅವಶ್ಯಕತೆಗಳನ್ನು ಕರ್ತನು ಪೂರೈಸುವಂತೆಯೂ ಭಾರದಿಂದ ಪ್ರಾರ್ಥಿಸಿರಿ.

ಸೇವೆ ಮಾಡುತ್ತಿರುವ ಪ್ರತಿಯೊಬ್ಬರೂ ಹಾಗು ಅವರ ಕುಟುಂಬಗಳು ಪರಿಶುದ್ಧತೆಯಲ್ಲಿ ಹಾಗು ದೈವಭಯದಲ್ಲಿ ನಡೆಯುವಂತೆಯೂ ಅವರು ಕರ್ತನ ಕೆಲಸಗಳನ್ನು ಮಾಡಲು ಬೇಕಾದ ದೇವಾಲೋಚನೆ ಹಾಗು ಪರಲೋಕ ಜ್ಞಾನವನ್ನು ಪಡೆಯುವಂತೆಯೂ ಪ್ರಾರ್ಥಿಸಿರಿ. ನಮ್ಮ ಕೈಗೆ ಒಪ್ಪಿಸಲಾಗಿರುವ ಪ್ರಚುರಣ ಹಾಗು ಮಾಧ್ಯಮ ಕೆಲಸಗಳಲ್ಲಿ ದೇವರ ಯೋಜನೆಗಳನ್ನು ಪರಲೋಕದ ಆಜ್ಞೆಗನುಸಾರವಾಗಿ ನೆರವೇರಿಸುವಂತೆ ಪ್ರಾರ್ಥಿಸಿರಿ. ಕರ್ತನು ನಮಗೆ ವಿಧೇಯತೆಯಿಂದ ಕೂಡಿದ ಹೃದಯವನ್ನು ದಯಪಾಲಿಸುವಂತೆಯೂ ತನ್ನ ವಾಕ್ಯಕ್ಕನುಸಾರವಾಗಿ ಕಾರ್ಯಮಾಡುವಂತೆಯೂ ಹಾಗು ಆತನ ರಾಜ್ಯಕ್ಕೆ ಸೂಕ್ತ ಪಾತ್ರೆಗಳಾಗಿಯೂ ಇರುವಂತೆ ಪ್ರಾರ್ಥನೆಮಾಡಿ.


3. ಸಹೋ. ಜೋನಾಥಾನ್ ಹಾಗು ಸಹೋದರಿ ಏಂಜಲಿನ್ ಜೋನಾಥಾನ್ ಅವರಿಗೋಸ್ಕರ ಪ್ರಾರ್ಥಿಸಿರಿ. ಕರ್ತನು ಅವರಿಗೆ ಒಳ್ಳೆಯ ಆರೋಗ್ಯವನ್ನು ಸಂರಕ್ಷಣೆಯನ್ನು ದಯಪಾಲಿಸುವಂತೆಯೂ, ಅವರ ಸೇವೆಯಲ್ಲಿ, ಜೀವನದಲ್ಲಿ ದೇವರ ಅನುಗ್ರಹ ಇರುವಂತೆಯೂ ಪ್ರಾರ್ಥನೆ ಮಾಡಿ. ಕರ್ತನ ಶಕ್ತಿಯಿಂದ ಕೂಡಿದವರಾಗಿ ಎಲ್ಲಾ ಕಾರ್ಯಗಳನ್ನು ಮಾಡುವಂತೆಯೂ, ದೇವರ ಕರೆಗೆ ನಂಬಿಗಸ್ಥರಾಗಿ ನಡೆಯುವಂತೆಯೂ ಕರ್ತನು ಅವರಿಗೆ ಕೃಪೆಯನ್ನು ದಯಪಾಲಿಸುವಂತೆ ಪ್ರಾರ್ಥಿಸಿರಿ. ಓಟವನ್ನು ಓಡಲು ಹಾಗು ದೇವರ ಉದ್ದೇಶವನ್ನು ನೆರವೇರಿಸಲು ಭಕ್ತಿಯಿಂದ ಕೂಡಿದ ಜೀವನ ಜೀವಿಸಲು ದೇವರ ಅಭಿಷೇಕ ನಮ್ಮೆಲ್ಲರ ಮೇಲೆ ನೆಲೆಗೊಳ್ಳುವಂತೆ ಪ್ರಾರ್ಥಿಸಿರಿ. ಕರ್ತನ ಬರೋಣಕ್ಕೆ ಜನರನ್ನು ಸಿದ್ಧಗೊಳಿಸುವಂತೆ ದೇವರ ವಾಕ್ಯದಲ್ಲಿ ಹೇಳಲಾದ ಆಜ್ಞೆಗಳನ್ನೆಲ್ಲಾ ಜನರಿಗೆ ಕಲಿಸುವಂತೆಯೂ ಪ್ರಾರ್ಥಿಸಿರಿ.



**“ಇದಲ್ಲದೆ ಪ್ರವಾದನ ವಾಕ್ಯವು ನಮಗೆ ಮತ್ತೂ ದೃಢವಾಗಿದೆ. ನಿಮ್ಮ ಹೃದಯುದೊಳಗೆ ಬೆಳ್ಳಿಯು ಮೂಡಿಅರುಣೋದಯುವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಡುವದೇ ಒಳ್ಳೇದು” (2 ಪೇತ್ರ 1:19).**



4. ಯೇಸುವಿನ ಸ್ವರ ಮಾಧ್ಯಮ ಸೇವೆಯ ಮುಖ್ಯ ದರ್ಶನ ಯಾವುದೆಂದರೆ, ಎಲ್ಲಾ ಜನರ ಮಧ್ಯದಲ್ಲಿಯೂ ಹಾಗು ಮುಂಬರುವ ಪೀಳಿಗೆಗೂ ದೇವರ ವಾಕ್ಯವನ್ನು ಪ್ರಕಟಿಸುವಂಥದ್ದೇ ಆಗಿದೆ. ಆದ್ದರಿಂದ ಪ್ರಪಂಚದ ಸಲುವಾಗಿ ನಾವು ಅನೇಕ ಅಡೆತಡೆಗಳನ್ನು, ಸವಾಲುಗಳನ್ನು ಎದುರಿಸಿದರೂ ದೇವರ ದರ್ಶನ ಮಾತ್ರ ತಪ್ಪದೆ ನೆರವೇರುವಂತೆ ಪ್ರಾರ್ಥಿಸಿರಿ.



ಪ್ರವಾದನೆಗಳು




ಯು-ಟ್ಯೂಬ್ ಚಾನಲ್



ಕರಪತ್ರಗಳು

5. ನಮ್ಮ ಸೇವೆಯು ದೇವರ ಪ್ರವಾದನಾ ವರಗಳನ್ನು ಭದ್ರಪಡಿಸುವ ಉಗ್ರಾಣದ (ವಸ್ತುಗಳು ಹಾಗು ಡಿಜಿಟಲ್ ರೂಪದಲ್ಲಿ) ಹಾಗೆ ಕಾರ್ಯಮಾಡುತ್ತಿದೆ. ಆದ್ದರಿಂದ ಈ ದೇವರ ಮನೆಯು ಪರಿಶುದ್ಧತೆಯಲ್ಲಿ, ಯಥಾರ್ಥತೆಯಲ್ಲಿ ಸರಳತೆಯಲ್ಲಿಯೂ ಸೈತಾನನ ಕುತಂತ್ರಗಳಿಂದ ಸಂರಕ್ಷಿಸಲ್ಪಡುವಂತೆ ಪ್ರಾರ್ಥಿಸಿರಿ.

6. ಈ ಸೇವೆಯ ಕಾರ್ಯಗಳಲ್ಲಿ ತೊಡಗಿರುವ ಎಲ್ಲರಿಗಾಗಿ ಪ್ರಾರ್ಥಿಸಿರಿ. ಅವರು ತಿಳುವಳಿಕೆಯಲ್ಲಿ ಹೆಚ್ಚುವಂತೆಯೂ, ದೇವರ ಚಿತ್ತವನ್ನು ಕುರಿತ ಭಾರವನ್ನು ಹೊಂದಿರುವಂತೆ ಹಾಗು ತಮ್ಮ ತಮ್ಮ ಕಚೇರಿಗಳಿಗೆ ಸಂಬಂಧಿಸಿ ಜವಾಬ್ದಾರಿಗಳನ್ನು ಚೆನ್ನಾಗಿ ನಿಭಾಯಿಸುವಂತೆ ಪ್ರಾರ್ಥನೆ ಮಾಡಿರಿ.

7. ಈ ಸೇವೆಯ ಮೂಲಕ ದೇವರ ವಾಕ್ಯ ಪ್ರಕಟಿಸಲಾಗುತ್ತಿರುವ ವೇದಿಕೆಗಳಿಗಾಗಿ ಪ್ರಾರ್ಥಿಸಿರಿ. ಕರಪತ್ರಗಳು, ಪುಸ್ತಕಗಳು, ಸಿಡಿಗಳು, ಸಾಮಾಜಿಕ ಮಾಧ್ಯಮಗಳಾದ (ಯು-ಟ್ಯೂಬ್, ಫೇಸ್‌ಬುಕ್, ವಾಟ್ಸ್‌ಆ್ಯಪ್ ಮುಂತಾದವು), ಜಾಲತಾಣಗಳು, ಈ ಎಲ್ಲಾ ವೇದಿಕೆಗಳ ಮೇಲೆ ದೇವರ ಸಂರಕ್ಷಣೆ ಇರುವಂತೆಯೂ, ಸೈತಾನನ ಕುತಂತ್ರಗಳಾಗಲಿ ಯೋಜನೆಗಳಾಗಲಿ ಕಾರ್ಯಮಾಡದಂತೆ ಭಾರದಿಂದ ಪ್ರಾರ್ಥಿಸಿರಿ.

# ಜಾನ್ ನಾಕ್ಸ್

## ಸ್ಕಾಟಿಷ್ ಮತ ನಾಯಕರು!

"ಪ್ರಾರ್ಥನೆ ಎಂಬದು ಅತ್ಯಾಸಕ್ತಿಯಿಂದ, ಅತಿ ಪರಿಚಯದಿಂದ ದೇವರೊಂದಿಗೆ ಮಾತನಾಡುವದೇ ಆಗಿದೆ." - ಜಾನ್ ನಾಕ್ಸ್


ಎಲ್ಲಕ್ಕಿಂತ ಹೆಚ್ಚಾಗಿ, ಜಾನ್ ನಾಕ್ಸ್ ಅವರು "ಸ್ಕಾಟ್‌ಲ್ಯಾಂಡನ್ನು ನನಗೆ ಕೊಡು ಇಲ್ಲದಿದ್ದರೆ ನನ್ನನ್ನು ತೆಗೆದುಕೋ" ಎಂಬ ತಮ್ಮ ಪ್ರಾರ್ಥನೆಗೆ ಹೆಸರುವಾಸಿಯಾಗಿದ್ದಾರೆ. ನಾಕ್ಸ್ ಅವರ ಪ್ರಾರ್ಥನೆ ಮೊಂಡುತನದ ಬೇಡಿಕೆಯಲ್ಲ. ಆದರೆ ಸುವಾರ್ತೆಯ ಯಥಾರ್ಥ ಬೋಧನೆ ಹಾಗು ತನ್ನ ದೇಶದ ಜನರ ರಕ್ಷಣೆಗಾಗಿ ಸಾಯಲು ಸಿದ್ಧನಾಗಿರುವ ಒಬ್ಬ ವ್ಯಕ್ತಿಯ ಅತ್ಯಾಸಕ್ತಿಯಿಂದ ಕೂಡಿದ ವಿಜ್ಞಾಪನೆಯಾಗಿದೆ. ತನ್ನ ಜನರ ರಕ್ಷಣೆಗಾಗಿ, ಒಂದು ದೇಶದ ಉಜ್ಜೀವನಕ್ಕಾಗಿ, ಹಾಗು ತನ್ನ ಸಭೆಯ ಸುಧಾರಣೆಗಾಗಿ ದೀನತೆಯಿಂದ ಸರ್ವಶಕ್ತನಾದ ದೇವರ ಮೇಲೆ ಆಧಾರಗೊಂಡಿರುವದೇ ನಾಕ್ಸ್ ರವರ ದೊಡ್ಡಸ್ತಿಕೆ. ತಮ್ಮ ಪ್ರಸಂಗ ಹಾಗು ಪ್ರಾರ್ಥನೆಗಳ ಆಧಾರದ ಮೇರೆಗೆ ನಾಕ್ಸ್ ಅವರು ತಮ್ಮ ಬೋಧನೆಯ ಶಕ್ತಿಯ ಮೇಲೆಯೋ ಅಥವಾ ತಮ್ಮ ಪ್ರಾರ್ಥನೆಯ ಶಕ್ತಿಯ ಮೇಲೆಯೋ ನಂಬಿಕೆಯಿಡಲಿಲ್ಲ. ಅದಕ್ಕೆ ಬದಲಾಗಿ ತಮ್ಮ ನಂಬಿಕೆಯನ್ನು ಸುವಾರ್ತೆಯ ಶಕ್ತಿಯ ಮೇಲೂ ದೇವರ ಶಕ್ತಿಯ ಮೇಲೂ ಇಟ್ಟಿದ್ದರು. ಅವರು ತನ್ನ ಜನರ ರಕ್ಷಣೆಯ ವಿಷಯದಲ್ಲಿ ಬೋಧನೆ ಹಾಗು ಪ್ರಾರ್ಥನೆ ಎರಡನೆಯ ಕಾರ್ಯವಾಗಿಯೇ ಇರುತ್ತದೆ.

ನಾಕ್ಸ್ ಅವರನ್ನು ಸೆರೆಗೆ ಹಾಕಿ ದಾಸತ್ವ ಮಾಡಿಸಿದರೂ, ಅವರು ಆಗಾಗ್ಗೆ ಅಸ್ವಸ್ಥರಾಗುತ್ತಿದ್ದರೂ, ಅವರಿಗೆ ಹಿಂಸೆಯ ಬೆದರಿಕೆ ಇರುತ್ತಿದ್ದರೂ, ಅವರು ಮಾತ್ರ ದೇವರ ವಾಕ್ಯಕ್ಕನುಸಾರವಾಗಿಯೇ ಜೀವಿಸುತ್ತಿದ್ದರು. "ಒಬ್ಬ ವ್ಯಕ್ತಿ ದೇವರೊಂದಿಗೆ ಇದ್ದರೆ ಅವನಿಗೆ ಬಹುಮತ ಇರುತ್ತದೆ" ಎಂಬದನ್ನು ನಂಬಿದರು. ದೇವರ ಸಿಂಹಾಸನದ ಮುಂದೆ ಒಬ್ಬ ವ್ಯಕ್ತಿಯ ಪ್ರಾರ್ಥನೆಗಳು ಕೇಳಿಸಿದಾಗ, ಅದು ಸ್ಕಾಟ್‌ಲ್ಯಾಂಡ್ ಸಿಂಹಾಸಕ್ಕೆ ಅಪಾಯ. ಹದಿನಾರನೆಯ ಶತಮಾನದ ಸ್ಕಾಟಿಷ್ ಸುಧಾರಣೆಯಲ್ಲಿ, ನಾಕ್ಸ್ ಅವರ ಬೋಧನೆ ಹಾಗು ಪ್ರಾರ್ಥನೆಗಳು ಎಷ್ಟು ಪ್ರಸಿದ್ಧವಾಗಿದ್ದವೆಂದರೆ, ರೋಮನ್ ಕಥೋಲಿಕದ ಮರಿಯಳು, ಸ್ಕಾಟ್‌ಲ್ಯಾಂಡ್‌ನ ಮಹಾರಾಣಿ, ಈ ರೀತಿ ಹೇಳಿದ್ದಾರೆ, "ಇಡೀ ಯೂರೋಪ್ ಖಂಡದ ಒಟ್ಟುಗೂಡಿಸಲಾದ ಸೇನೆಗಳಿಗಿಂತಲೂ ಜಾನ್ ನಾಕ್ಸ್‌ರವರ ಪ್ರಾರ್ಥನೆಗಳಿಗೆ ನಾನು ಹೆದರುತ್ತೇನೆ" ಎಂಬದಾಗಿ ಹೇಳಿದರು.

ಎಲ್ಲಕ್ಕಿಂತ ಹೆಚ್ಚಾಗಿ, ನಾಕ್ಸ್ ರವರು ಸಮರ್ಪಿಸಿಕೊಂಡಿದ್ದ ಸಭಾಪಾಲಕರು ಹಾಗು ಸಭೆಗೆ ಸಂಬಂಧಿಸಿದ ವ್ಯಕ್ತಿಯೂ ಆಗಿದ್ದರು. ಅವರ ಸೇವೆಯು ಸ್ಕಾಟ್‌ಲ್ಯಾಂಡ್‌ನಾದ್ಯಂತ ಎಲ್ಲಾ ಸಭಾಪಾಲಕರಿಗೆ ದಿಕ್ಸೂಚಿಯಂತಿತ್ತು. ಸುವಾರ್ತೆಯನ್ನು ಬೋಧಿಸುವ ವಿಷಯದಲ್ಲಿ ಅವರಿಗಿದ್ದಂತ ಅಚಲವಾದ ಸಮರ್ಪಣೆ ಎಂಥದ್ದೆಂದರೆ, ಸೈದ್ಧಾಂತಿಕವಾಗಿದ್ದು ಸಭೆಯೊಂದಿಗೆ ರಾಜಿಯಾಗಿದ್ದ ದೇಶದಲ್ಲಿ ಕತ್ತಲಾಗಿದ್ದ ದೇಶಕ್ಕೆ ಬೆಳಕಾಗಿಯೂ ಇತ್ತು. ದೇಶದಾದ್ಯಂತ ಅವರು ದೇವರ ಕುರುಬರನ್ನು ಪುನಃಶ್ಚೇತನಗೊಳಿಸಿದರು. ಇದರ ಮೂಲಕ ಸಭೆಯು ಸುಧಾರಣೆ ಹೊಂದಿ, ದೇವರ ಕೃಪೆಯಿಂದ ದೇಶವು ಉಜ್ಜೀವನ ಹೊಂದಿತು. ಮುಖ್ಯವಾಗಿ, ನಾಕ್ಸ್ ರವರ ವ್ಯಕ್ತಿತ್ವದಲ್ಲಿ ಸಭಾಪಾಲಕರನ್ನು ಪ್ರೇರಿಸಿದ ಕಾರ್ಯ ಯಾವುದೆಂದರೆ, ಅವರು ದೇವರಿಗೆ ಹೆದರುತ್ತಿದ್ದರಿಂದ ಮನುಷ್ಯರಿಗೆ ಭಯಪಡುತ್ತಿರಲಿಲ್ಲ- ಯಾಕಂದರೆ ಅವರು ದೇವರನ್ನು ನೋಯಿಸಲು ಬಯಸುತ್ತಿರಲಿಲ್ಲ ಹಾಗಾಗಿ ಅವರ ಪ್ರಂಗಗಳ ಸಾರಾಂಶವು ಮನುಷ್ಯರನ್ನು ನೋಯಿಸುತ್ತಿತ್ತು.

ದೇವರು ಸ್ಕಾಟ್‌ಲ್ಯಾಂಡನ್ನು ಖಂಡಿತವಾಗಿ ರಕ್ಷಿಸುತ್ತಾನೆಂದು ಜಾನ್ ನಾಕ್ಸ್ ಅವರು ಕೊನೆಯ ವರೆಗೂ ಬೋಧಿಸುತ್ತಾ ಪ್ರಾರ್ಥನೆ ಮಾಡುತ್ತಲೇ ಇದ್ದರು. ಯಾಕಂದರೆ ಅವರು ಯೇಸು ಕ್ರಿಸ್ತನ ವಾಗ್ದಾನಗಳನ್ನು ಹಿಡಿದುಕೊಂಡು ಕರ್ತನು ಎಲ್ಲಾ ಭಾಷೆಯವರನ್ನು, ದೇಶದವರನ್ನು, ವರ್ಗದವರನ್ನು ರಕ್ಷಿಸುತ್ತಾನೆಂದು ಪ್ರಾರ್ಥನೆ ಮಾಡುತ್ತಿದ್ದರು. ಹೀಗಿರುವಲ್ಲಿ, ಅವರು ಮರಣಕ್ಕೆ ಹತ್ತಿರವಾದಾಗ, ತಮ್ಮ ಹೆಂಡತಿಯನ್ನು ಕರೆದು, ಯೋಹಾನ 17ನೇ ಅಧ್ಯಾಯದಲ್ಲಿ ಬರೆದಿರುವ, ನಮ್ಮ ಕರ್ತನಾದ ಯೇಸು ಕ್ರಿಸ್ತನು ಶಿಲುಬೆಗೆ ಹಾಕಲ್ಪಡುವ ಹಿಂದಿನ ರಾತ್ರಿ ಮಾಡಿದ ಪ್ರಾರ್ಥನೆಯನ್ನು ಓದುವಂತೆ ಹೇಳಿದರು. ನಾಕ್ಸ್ ಅವರು ಈ ಭಾಗವನ್ನು "ನನ್ನ ಮೊದಲ ಆಧಾರ" ಎಂದು ಕರೆದರು. ಕ್ರಿಸ್ತನು ನಮ್ಮ ಆತ್ಮಗಳ ನಾಯಕನೂ ಹಾಗು ಕ್ರಿಸ್ತನ ಪ್ರಾರ್ಥನೆಯು ನಮ್ಮ ಆಧಾರವೂ ದೇಶಗಳಿಗೆ ನಿರೀಕ್ಷೆಯೂ ಆಗಿದೆ.

ಒಬ್ಬ ವ್ಯಕ್ತಿಯ ಮೂಲಕ ಕಾರ್ಯ ಮಾಡುತ್ತಿರುವ ದೇವರ ಶಕ್ತಿಯ ಉತ್ತಮ ಉದಾಹರಣೆಯ ಬೆಳಕಿನಲ್ಲಿ - ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮ ದೇಶಕ್ಕಾಗಿ - ಎಲ್ಲಾ ದೇಶಗಳಿಗಾಗಿ ನಾಕ್ಸ್ ರವರು ಸ್ಕಾಟ್‌ಲ್ಯಾಂಡ್‌ಗಾಗಿ ಪ್ರಾರ್ಥನೆ ಮಾಡಿದ ಹಾಗೆ ಅದೇ ಹಂಬಲದಿಂದಲೂ ಆಸಕ್ತಿಯಿಂದಲೂ ಪ್ರಾರ್ಥಿಸೋಣ (ಲೇಖನ ಕೃತಜ್ಞತೆ ligonier.org).



# Stay Tuned!

## Prophet Vincent Selvakumaar's

### kannada Programs






**Watch On**


01 **Biblical Insights**

Every Sundays
@9pm

**Youtube Channel**
@Vincentselvakumaar
Kannada
Subcribe Today!

**Facebook Page**
@Vincentselvakumaar
Kannada
Like Us Today!

**Instagram**
@Vincentselvakumaar
Kannada
Follow Us Today!



02 **Right Word @ Right Time**

Every Fridays
@8pm